

بِسۡمِ اللّٰہِ الرَّحۡمٰنِ الرَّحِیۡمِ

# ಜರ್ಮನಿ ಮತ್ತು ಬೆಲ್ಜಿಯಂ ಪ್ರವಾಸ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **21–09–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಕೆಲವು ದಿನಗಳಲ್ಲಿ ಜರ್ಮನಿ ಮತ್ತು ಬೆಲ್‌ಜಿಯಮ್ ದೇಶಗಳ ಜಲ್ಸ ಸಾಲಾನಗಳಲ್ಲಿ ಭಾಗವಹಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಿದನು. ಎರಡು ಜಲ್ಸಗಳೂ ಅಲ್ಲಾಹನ ಅನುಗ್ರಹದಿಂದ ಬಹಳ ಅನುಗ್ರಹಭರಿತವಾಗಿದ್ದುವು. ಜರ್ಮನಿಯ ಜಮಾಅತ್‌ನಲ್ಲಿ ಈಗ ಜಲ್ಸದ ವ್ಯವಸ್ಥೆ ಬಹಳ ಮಟ್ಟಿಗೆ ಸುವ್ಯವಸ್ಥಿತವಾಗಿದೆ. ಯುರೋಪಿನ ಪೂರ್ವಭಾಗದ ಸುತ್ತುಮುತ್ತಲಿನ ದೇಶಗಳ ಜನರು ಮಾತ್ರವಲ್ಲ ಕೆಲವು ಬೇರೆ ದೇಶಗಳ ಜನರು ಸಹ ಜಲ್ಸದಲ್ಲಿ ಭಾಗವಹಿಸಲು ಆಗಮಿಸುತ್ತಾರೆ. ಈ ವರ್ಷ ಆಫ್ರಿಕದ ಕೆಲವು ದೇಶಗಳ ಜನರು ಸಹ ಜರ್ಮನಿಯ ಜಲ್ಸದಲ್ಲಿ ಭಾಗವಹಿಸಿದರು. ಹೊರಗಿನಿಂದ ಬರುವ ಅತಿಥಿಗಳು ನಮ್ಮ ಜಲ್ಸಗಳಲ್ಲಿ ಬಂದು ಸೇರಿ ಉತ್ತಮ ಪ್ರಭಾವಗಳಿಗೆ ಪಾತ್ರರಾಗುತ್ತಾರೆ ಮತ್ತು ಅವರು ಅವುಗಳ ಬಗ್ಗೆ ಸ್ವತಃ ಹೇಳುತ್ತಾರೆ. ಜಲ್ಸದ ಸುವ್ಯವಸ್ಥೆ ಮತ್ತು ಜಲ್ಸದ ಉತ್ತಮ ಪರಿಸರದ ಬಗ್ಗೆ ಅತಿಥಿಗಳು ಬಹಳ ಪ್ರಶಂಸಿ ಹೇಳುತ್ತಾರೆ: ಇಸ್ಲಾಮಿನ ವಾಸ್ತವಿಕ ಉಪದೇಶಗಳು ಏನೆಂದು ನಮಗೆ ಇಲ್ಲಿಗೆ ಆಗಮಿಸಿದಾಗ ತಿಳಿದುವು ಎಂದು. ಜಲ್ಸದಲ್ಲಿ ಭಾಗವಹಿಸಿದ ಈ ಅತಿಥಿಗಳು ಪ್ರತಿಯೊಬ್ಬ ಕಾರ್ಯಕರ್ತನನ್ನು, ಪ್ರತಿಯೊಬ್ಬ ಅಧಿಕಾರಿಯನ್ನು, ಪ್ರತಿಯೊಬ್ಬ ಅಹ್ಮದಿಯನ್ನು ಬಹಳ ಸೂಕ್ಷ್ಮವಾಗಿ ವೀಕ್ಷಿಸುತ್ತಾರೆ ಮತ್ತು ಅವರ ವರ್ತನೆಗಳು ಹೇಗಿವೆ ಎಂದು ನೋಡುತ್ತಾರೆ. ಉಪದೇಶಗಳು ಉತ್ತಮವಾಗಿದ್ದರೂ ಆ ಉಪದೇಶಗಳನ್ನು ಅನುಸರಿಸುವವರ ಕರ್ಮಗಳು ಉತ್ತಮವಾಗಿರದಿದ್ದರೆ ಆ ಉಪದೇಶಗಳು ಉತ್ತಮ ಪ್ರಭಾವ ಬೀರಲಾರವು. ಈ ನಿಟ್ಟಿನಲ್ಲಿ ಜಲ್ಸದಲ್ಲಿ ಭಾಗವಹಿಸುವ ಎಲ್ಲಾ ಸ್ವಯಂಸೇವಕರಾದ ಕಾರ್ಯಕರ್ತರು ಮತ್ತು ಜಲ್ಸದಲ್ಲಿ ಭಾಗವಹಿಸುವ ಅಹ್ಮದಿಯರು ಮೌನವಾಗಿ ಒಂದು ತಬ್ಲೀಗ್ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಮುಸ್ಲಿಮೇತರರ ಮನಸ್ಸಿನಲ್ಲಿ ಇಸ್ಲಾಮ್ ಬಗ್ಗೆ ಇರುವ ತಪ್ಪು ಗ್ರಹಿಕೆಗಳನ್ನು ಅವರು ದೂರ ಸರಿಸುತ್ತಾ ಇರುತ್ತಾರೆ. ನಾಮಧಾರಿಗಳಾದ ಮುಸ್ಲಿಂ ವಿದ್ವಾಂಸರು ಮುಸ್ಲಿಮರ ಹೃದಯಗಳಲ್ಲಿ ತಪ್ಪು ಪ್ರಚಾರದ ಮೂಲಕ ಸೃಷ್ಟಿಸಿದ ತಪ್ಪು ಗ್ರಹಿಕೆಗಳನ್ನು ಸಹ ಅವರು ದೂರ ಸರಿಸುತ್ತಾ ಇರುತ್ತಾರೆ. ಅಹ್ಮದಿಯಾ ಜಮಾಅತ್ ಎಲ್ಲಿದ್ದರೂ ಯಾವ ದೇಶಗಳಲ್ಲಿದ್ದರೂ ಅಲ್ಲಾಹನ ಅನುಗ್ರಹದಿಂದ ಅನ್ಯರ ಮೇಲೆ ತನ್ನ ಉತ್ತಮ ಪ್ರಭಾವ ಬೀರುತ್ತದೆ ಮತ್ತು ತಬ್ಲೀಗ್ ಮಾಡುವ ಮಾರ್ಗವಾಗುತ್ತದೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಪ್ರತಿಯೊಬ್ಬ ಅಹ್ಮದಿ ತನ್ನ ಸ್ಥಿತಿಯನ್ನು ಉತ್ತಮ ಪಡಿಸುವ ಹೊಣೆಗಾರಿಕೆ ಎಷ್ಟರ ಮಟ್ಟಿಗೆ ಆವಶ್ಯಕವಾಗಿ ಇದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ನಾನು ಈ ಎರಡು ಜಲ್ಸಗಳಲ್ಲಿ ಕಾರ್ಯನಿರ್ವಹಿಸಿದ ಕಾರ್ಯಕರ್ತರಿಗೂ ಕೃತಜ್ಞತೆ ಅರ್ಪಿಸಲು ಇಚ್ಛಿಸುತ್ತೇನೆ. ಜರ್ಮನಿಯಲ್ಲಿಯೂ ಬೆಲ್‌ಜಿಯಮ್‌ನಲ್ಲಿಯೂ ಕಾರ್ಯಕರ್ತರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಜಲ್ಸದಲ್ಲಿ ಭಾಗವಹಿಸುವ ಅತಿಥಿಗಳಿಗೆ ಸೇವೆ ಸಲ್ಲಿಸಿದರು. ಜಲ್ಸಗಳಲ್ಲಿ ಭಾಗವಹಿಸಿದ ಅಹ್ಮದಿಯರು ಸಹ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಸಲ್ಲಿಸಲು ಮುಂದೆ ಬರುವವರು ವಿವಿಧ ವರ್ಗಗಳ ಮತ್ತು ವಿವಿಧ ಮನೋಭಾವಗಳ ಜನರಾಗಿರುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಸಲ್ಲಿಸುವ ಭಾಗ್ಯವನ್ನು ತಮಗೆ ನೀಡಿದುದಕ್ಕಾಗಿ ಕಾರ್ಯಕರ್ತರು ಸಹ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕಾಗಿದೆ ಮತ್ತು ಮುಂದಿನ ವರ್ಷ ಸೇವೆ ಸಲ್ಲಿಸಲು ತಮ್ಮನ್ನು ಸನ್ನದ್ಧರನ್ನಾಗಿ ಮಾಡಬೇಕಾಗಿದೆ. ಬಲಹೀನತೆಗಳು ಮತ್ತು ಕುಂದುಕೊರತೆಗಳೇನಾದರೂ ಸಂಭವಿಸಿದ್ದರೆ ಅವುಗಳ ಬಗ್ಗೆ ಚಿಂತಿಸಿ ಮುಂದಿನ ವರ್ಷ ಆ ನಿಟ್ಟಿನಲ್ಲಿ ಹೇಗೆ ಸುಧಾರಣೆ ಮಾಡಬಹುದೆಂದು ಯೋಚಿಸಬೇಕಾಗಿದೆ. ವಿಶಿಷ್ಟವಾಗಿ ಜಲ್ಸ ವ್ಯವಸ್ಥೆಯ ಅಧಿಕಾರಿಗಳು ತಮ್ಮ ಕಾರ್ಯನಿರ್ವಹಣೆಯನ್ನು ಪರಿಶೋಧಿಸಬೇಕು. ಮತ್ತು ಕಾರ್ಯಯೋಜನೆಗಳನ್ನು ಪರಿಶೋಧಿಸಬೇಕು. ಸಂಭವಿಸಿದ ಎಲ್ಲಾ ಕುಂದುಕೊರತೆಗಳನ್ನು ಒಂದು ಕೆಂಪು ಪುಸ್ತಕದಲ್ಲಿ ಬರೆದಿಡಬೇಕು ಮತ್ತು ಮುಂದಿನ ವರ್ಷ ಆ ಕುಂದುಕೊರತೆಗಳು ಪುನರಾವರ್ತಿಸದಂತೆ ನಿಗಾ ವಹಿಸಬೇಕು.

ಇನ್ನು, ಕೆಲವು ಅತಿಥಿಗಳ ಅಭಿಪ್ರಾಯಗಳನ್ನು ನಿಮ್ಮ ಮುಂದೆ ಪ್ರಸ್ತಾಪಿಸುತ್ತೇನೆ. ಜಲ್ಸ ಅಹ್ಮದಿಯರ ಮೇಲೆ ಮಾತ್ರವಲ್ಲ ಅಹ್ಮದಿಯೇತರರ ಮೇಲೆಯೂ ಪ್ರಭಾವ ಬೀರುತ್ತದೆ ಎಂದು ಆ ಮೂಲಕ ತಿಳಿಯಬಹುದಾಗಿದೆ. ಬೋಸ್ನಿಯಾ ದೇಶದ ಅಹ್ಮದಿಯೇತರ ಮಸ್‌ಜಿದ್‌ನ ಒಬ್ಬ ಇಮಾಮ್ ಆಗಮಿಸಿದ್ದರು. ಅವರು ಹೇಳುತ್ತಾರೆ: ಅಹ್ಮದಿಯರೊಂದಿಗೆ ಸ್ವಲ್ಪಕಾಲ ಸಹವಾಸ ಮಾಡಿದಾಗ ನನಗೆ ತಿಳಿಯಿತು, ನೀವೇ ಇಸ್ಲಾಮ್ ಧರ್ಮದ ನೈಜ ತತ್ವಗಳ ಪ್ರಚಾರವನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿರುವಿರಿ ಎಂದು. ಮುಸ್ಲಿಮರು ಲೌಕಿಕ ಮತ್ತು ಧಾರ್ಮಿಕ ಜ್ಞಾನಗಳನ್ನು ಗಳಿಸುವುದರಲ್ಲಿ ಬಹಳ ಹಿಂದುಳಿದಿದ್ದಾರೆಂಬುದು ದುಃಖಕರವಾಗಿದೆ. ಅಹ್ಮದಿಯಾ ಜಮಾಅತ್ ಖಿಲಾಫತ್ತಿನ ನೇತೃತ್ವದಲ್ಲಿ ಧಾರ್ಮಿಕ ಜ್ಞಾನದ ಪ್ರಚಾರಕ್ಕೋಸ್ಕರ ಸುವ್ಯವಸ್ಥಿತ ಪ್ರಯತ್ನ ಮಾಡುತ್ತಿದೆ. ಅವರು ಮುಸ್ಲಿಮರು ಕಳೆದುಕೊಂಡ ಘನತೆಯನ್ನು ಮರಳಿ ತರಲು ಪ್ರಯತ್ನ ಮಾಡುತ್ತಿದ್ದಾರೆ.

ಕಣ್ಣಿನ ದೃಷ್ಟಿಯಲ್ಲಿ ಬಲಹೀನತೆ ಹೊಂದಿದ ಮೋಂಟೆ ನೀಗ್ರೋ ದೇಶದ ಒಬ್ಬ ನಿವಾಸಿ ಜಲ್ಸದಲ್ಲಿ ಭಾಗವಹಿಸಿ ಹೇಳಿದರು: ನಾನು ಕಣ್ಣಿನ ಬಲಹೀನವಾದ ದೃಷ್ಟಿಯನ್ನು ಹೊಂದಿದ್ದರೂ ಈ ಜಲ್ಸದಲ್ಲಿ ಭಾಗವಹಿಸಿ ನಾನು ಎಲ್ಲವನ್ನೂ ಹೃದಯದ ಕಣ್ಣುಗಳಿಂದ ನೋಡಿದೆ. ಮತ್ತು ಈ ಜಲ್ಸದಿಂದ ಆತ್ಮದ ದಾಹವನ್ನು ನೀಗಿಸಿ ಮರಳಿ ಹೋಗುತ್ತಿದ್ದೇನೆ. ನಾನು ಯಾವ ದೇಶದ ನಿವಾಸಿಯಾಗಿರುವೆನೋ ಅಲ್ಲಿನ ಜನರು ಧರ್ಮದಿಂದ ಬಹಳ ದೂರವಿದ್ದಾರೆ. ಆಧ್ಯಾತ್ಮಿಕತೆ ಎಂದರೇನು ಎಂದು ನಮಗೆ ಗೊತ್ತೇ ಇಲ್ಲ. ಆದರೆ ಜಲ್ಸದ ಕಾಲದಲ್ಲಿ ನನಗೆ ಅನುಭವ ಜ್ಞಾನ ಲಭಿಸಿತು ದೇವನಿದ್ದಾನೆಂದು. ಅವನ ಅನುಗ್ರಹಗಳು ಶಾಂತಿ, ಸಮಾಧಾನ, ಮಾನಸಿಕ ನೆಮ್ಮದಿ ರೂಪದಲ್ಲಿ ಇಲ್ಲಿ ಸುರಿಸಲ್ಪಡುತ್ತವೆ. ನಾನು ಸಹ ಅವುಗಳ ಪಾಲು ಪಡೆದೆನು.

ಜರ್ಮನಿಯ ಜಲ್ಸದಲ್ಲಿ ಬೆಲ್‌ಜಿಯಂ ದೇಶದ 56 ಜನರು ಭಾಗವಹಿಸಿದ್ದರು. ಅವರ ಪೈಕಿ 31 ಜನರು ಅಹ್ಮದಿಯೇತರ ಅತಿಥಿಗಳಾಗಿದ್ದರು. ಅವರು ನನ್ನನ್ನು ಸಹ ಸಂದರ್ಶಿಸಿದ್ದರು. ಆ ಗುಂಪಿನಲ್ಲಿದ್ದ ಒಬ್ಬ ಮಹಿಳೆ ಹೇಳಿದರು: ನಾನು ಇತರರ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಆದರೆ ಅಹ್ಮದಿಯಾ ಜಮಾಅತಿನ ಜಲ್ಸದಲ್ಲಿದ್ದ ಆಧ್ಯಾತ್ಮಿಕ ಪರಿಸರ ಬಹಳ ನೆಮ್ಮದಿದಾಯಕವಾಗಿತ್ತು. ಜನರು ನಮ್ಮನ್ನು ಬಹಳ ಗೌರವ ಭಾವದಿಂದ ಕಾಣುತ್ತಿದ್ದರು. ಅವರ ಕಣ್ಣುಗಳಿಂದ ಅವರ ವಿಶ್ವಾಸದ ಬಗ್ಗೆ ಅಂದಾಜು ಮಾಡಬಹುದಾಗಿತ್ತು. ಅವರು ಎಷ್ಟು ಉತ್ತಮ ಜನರಾಗಿದ್ದಾರೆ ಎಂದು ತಿಳಿಯುತ್ತಿತ್ತು. ಖಲೀಫರ ಭಾಷಣಗಳು ನನ್ನ ಹೃದಯದ ಮೇಲೆ ಬಹಳ ಗಾಢವಾದ ಪ್ರಭಾವ ಬೀರಿದುವು. ಭಾಷಣ ಆಲಿಸುವಾಗ ನಾನು ಅಳುತ್ತಾ ಇದ್ದೆ. ನನ್ನ ಹೊಸ ಜೀವಿತ ಪ್ರಾರಂಭವಾಗುತ್ತಿದೆ ಎಂದು ನನಗೆ ತೋಚುತ್ತಿತ್ತು. ನನ್ನ ಮುಂದಿನ ಜೀವಿತ ಕಾಲವನ್ನು ಈ ಉಪದೇಶಗಳ ಬೆಳಕಿನಲ್ಲಿ ಕಳೆಯುವುದಕ್ಕೆ ಪ್ರಯತ್ನಿಸುವೆನು. ಈ ಆಧ್ಯಾತ್ಮಿಕ ಪರಿಸರದ ಲಾಭ ಪಡೆಯಲು ನನಗೆ ಸಂದರ್ಭ ಒದಗಿಸಿ ಕೊಟ್ಟದ್ದಕ್ಕಾಗಿ ನಾನು ತಮಗೆ ಕೃತಜ್ಞಳಾಗಿದ್ದೇನೆ.

ಒಬ್ಬ ಕ್ರೈಸ್ತ ಮಹಿಳೆ ಕ್ರೇಸಿ ಮೀರಾ ಸಾಹಿಬ ಹೇಳುತ್ತಾರೆ: ನಾನು ನನ್ನ ಪತಿ ಮತ್ತು ಮಕ್ಕಳೊಂದಿಗೆ ಜಲ್ಸದಲ್ಲಿ ಭಾಗವಹಿಸಿರುವೆನು. ಇಷ್ಟು ಸುವ್ಯವಸ್ಥಿತ ಅತಿಥಿ ಸತ್ಕಾರ ವ್ಯವಸ್ಥೆಯನ್ನು ಇದಕ್ಕಿಂತ ಮುಂಚೆ ಎಲ್ಲಿಯೂ ನಾನು ಕಾಣಲಿಲ್ಲ. ತಂದೆ ತಾಯಂದಿರನ್ನು ಗೌರವಿಸುವ ಬಗ್ಗೆ ಮತ್ತು ಮಕ್ಕಳನ್ನು ತರಬೇತಿಗೊಳಿಸುವ ಬಗ್ಗೆ ಬಹಳ ಕಲಿತುಕೊಂಡೆನು. ನಾನು ಆ ಉಪದೇಶಗಳನ್ನು ನನ್ನ ಜೀವಿತದ ಭಾಗವನ್ನಾಗಿ ಮಾಡುವೆನು. ಪುರುಷರು ಮಹಿಳೆಯರನ್ನು ಗೌರವಿಸುತ್ತಿದ್ದ ರೀತಿಯನ್ನು ಕಂಡು ನನಗೆ ಬಹಳ ಆಶ್ಚರ್ಯವಾಯಿತು. ಮಹಿಳೆಯರಿಗೆ ಇಷ್ಟು ಗೌರವ ನೀಡುವುದನ್ನು ನಾನು ಕ್ರೈಸ್ತ ಸಮಾಜದಲ್ಲಿ ಕಂಡಿಲ್ಲ. ನಾನು ಕೃತಜ್ಞತೆಯಿಂದ ತಮಗೋಸ್ಕರ ಪಾರ್ಥಿಸುತ್ತೇನೆ.

ಪುರುಷರಿಗೆ ಇದರಲ್ಲಿ ಒಂದು ಪಾಠವಿದೆ. ಜಲ್ಸದ ದಿನಗಳಲ್ಲಿ ಮಾತ್ರವಲ್ಲ ಯಾವಾಗಲೂ ಮಹಿಳೆಯರ ಬಗ್ಗೆ ಗೌರವ ಅವರ ಹೃದಯಗಳಲ್ಲಿರಬೇಕು. ಇದು ಅಲ್ಲಾಹನು ನಮಗೆ ನೀಡಿದ ಉಪದೇಶಗಳ ಪ್ರಕಾರವೇ ಆಗಿದೆ. ಒಬ್ಬ ಅಹ್ಮದಿಯೇತರ ಮುಸ್ಲಿಮ್, ಮುಹಮ್ಮದ್ ಯೂಸುಫ್ ಸಾಹಿಬ್ ಹೇಳಿದರು: ಅಹ್ಮದಿಯಾ ಜಮಾಅತಿನ ವಿರುದ್ಧ ನಾನು ಅನೇಕ ಆಕ್ಷೇಪಗಳನ್ನು ಆಲಿಸಿದ್ದೆ. ಜಲ್ಸದ ಪರಿಸರವನ್ನು ನೋಡಿದಾಗ ನನ್ನ ಹೃದಯ ಎಲ್ಲಾ ರೀತಿಗಳಲ್ಲೂ ಶುದ್ಧವಾಯಿತು. ಎಲ್ಲಾ ಕಡೆಗಳಲ್ಲಿಯೂ, ಖಿಲಾಫತಿನ ಬಗ್ಗೆ, ಪವಿತ್ರ ಖುರ್‌ಆನ್ ಬಗ್ಗೆ, ಹದೀಸುಗಳ ಬಗ್ಗೆ ಉಪದೇಶಿಸಲಾಗುತ್ತಿತ್ತು. ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ ಎಂಬ ಧ್ಯೇಯ ವಚನ ನನ್ನ ಮೇಲೆ ಬಹಳ ಪ್ರಭಾವ ಬೀರಿತು. ಎಲ್ಲಾ ಕಡೆಗಳಲ್ಲೂ ಶಾಂತಿ ಮತ್ತು ಸಮಾಧಾನದ ಪರಿಸರವಿತ್ತು. ಖಲೀಫರ ಭಾಷಣದ ಸಂದರ್ಭದಲ್ಲಿ ಸಂಪೂರ್ಣ ನಿಶ್ಶಬ್ಧತೆ ಇತ್ತು. ಬಹಳಷ್ಟು ಮನಃಸಮಾಧಾನ ಲಭಿಸಿತು. ಜಲ್ಸದ ಕಾಲದಲ್ಲಿಯೇ ನಾನು ನಿರ್ಧರಿಸಿದೆ ನಾನು ಈ ಜಮಾಅತಿಗೆ ಸೇರುವೆನೆಂದು. ಇನ್ನು ಮುಂದೆ ನಾನು ಜಮಾಅತಿನ ಸಂದೇಶವನ್ನು ಪ್ರಚಾರ ಮಾಡುವೆನು.

ಲ್ಯಾಟೀವಿಯಾ ದೇಶದಿಂದ ಒಬ್ಬ ಮೆಡಿಕಲ್ ವಿದ್ಯಾರ್ಥಿ ಆಗಮಿಸಿದ್ದರು. ಅವರು ಹೇಳುತ್ತಾರೆ: ಜರ್ಮನಿಯ ಜಲ್ಸ ಸಾಲಾನದಲ್ಲಿ ಭಾಗವಹಿಸಲು ಸಾಧ್ಯವಾದುದು ನನಗೆ ಬಹಳ ಗೌರವಾರ್ಹವಾಗಿದೆ. ಇದು ಎಂತಹ ಸಮಾವೇಶವೆಂದರೆ ಬಲಿಷ್ಠವಾದ ವಿಶ್ವಾಸ ಹೊಂದಿದವರೂ, ನೆಮ್ಮದಿ ಭರಿತ ಹೃದಯ ಹೊಂದಿದವರೂ, ಭ್ರಾತೃ ಪ್ರೇಮಭರಿತರೂ ಆಗಿರುವ ಶಾಂತಿಪ್ರಿಯ ಜನರ ಸಭೆ ಇದಾಗಿದೆ ಎಂದು ನನಗೆ ಭಾಸವಾಯಿತು. ಪ್ರತಿಯೊಬ್ಬನು ತಲ್ಲೀನತೆಯಿಂದ ಭಾಷಣಗಳನ್ನು ಆಲಿಸುತ್ತಾ ಕಾರ್ಯನಿರತನಾಗಿರುವುದನ್ನು ಕಂಡು ನನಗೆ ಆಶ್ಚರ್ಯವಾಯಿತು.

ಲ್ಯಾಟೀವಿಯಾ ದೇಶದಿಂದಲೇ ಒಬ್ಬ ಅಹ್ಮದಿಯೇತರ ಪಾಕಿಸ್ತಾನಿ ವ್ಯಕ್ತಿ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ: ಇಷ್ಟು ಪ್ರೀತಿ, ಗೌರವದಿಂದ ಅತಿಥಿ ಸತ್ಕಾರವನ್ನು ಮಾಡುವುದನ್ನು ನಾನು ಎಲ್ಲಿಯೂ ನನ್ನ ಜೀವಿತ ಕಾಲದಲ್ಲಿ ಕಾಣಲಿಲ್ಲ. ಎಲ್ಲಾ ಮುಸ್ಲಿಮೇತರರ ಮೇಲೆ ಇದರ ಉತ್ತಮ ಪ್ರಭಾವ ಉಂಟಾಗುವುದನ್ನು ಕಂಡು ನನಗೆ ಬಹಳ ಸಂತೋಷವಾಯಿತು. ನಾನು ನನ್ನ ಪಂಗಡವನ್ನು ಒಳ್ಳೆಯ ಪಂಗಡ ಎಂದು ಹೇಳಬೇಕೋ ಅಥವಾ ಅಹ್ಮದಿಯಾ ಪಂಗಡವನ್ನು ಒಳ್ಳೆಯದೆಂದು ಹೇಳಬೇಕೋ ಎಂದು ಚಿಂತಿಸಲು ನಾನು ನಿರ್ಬಂಧಿತನಾಗಿದ್ದೇನೆ. ನನ್ನ ಜೊತೆ ಕೆಲವು ಮುಸ್ಲಿಮೇತರ ಸ್ನೇಹಿತರಿದ್ದರು. ಅಹ್ಮದಿಯಾ ಜಮಾಅತಿನ ಮುಸ್ಲಿಮರು ಅವರಿಗೆ ನೀಡಿದ ಗೌರವದಿಂದ ಅವರು ಬಹಳ ಪ್ರಭಾವಿತರಾಗಿದ್ದಾರೆ. ಪ್ರತಿಯೊಬ್ಬ ವ್ಯಕ್ತಿ ಬಹಳ ಗೌರವದಿಂದಲೂ ಪ್ರೀತಿಯಿಂದಲೂ ಮಾತನಾಡಿದರು ಮತ್ತು ಮಾರ್ಗದರ್ಶನ ನೀಡುತ್ತಿದ್ದರು. ಇಷ್ಟು ದೊಡ್ಡ ಸಮಾವೇಶವನ್ನು ಬಹಳ ಸುಂದರವಾಗಿ ವ್ಯವಸ್ಥೆಗೊಳಿಸಿದರು. ನಾನು ಹೃತ್ಪೂರ್ವಕವಾಗಿ ಕೃತಜ್ಞತೆ ಅರ್ಪಿಸುತ್ತೇನೆ.

ಯುನಿವರ್ಸಿಟಿ ಆಫ್ ಅಗ್ರಿಕಲ್‌ಚರ್ ಲ್ಯಾಟೀವಿಯಾದ ಒಬ್ಬ ಪ್ರಾಧ್ಯಾಪಕರು, ಶ್ರೀಲಂಕದವರು, ಜಲ್ಸಕ್ಕೆ ಆಗಮಿಸಿದ್ದರು. ಅವರು ಹೇಳುತ್ತಾರೆ: ಈ ಜಲ್ಸದಿಂದ ನಾನು ಗ್ರಹಿಸಿದ ಅತ್ಯುತ್ತಮ ಅಂಶವೇನೆಂದರೆ ಅಹ್ಮದಿಯಾ ಜಮಾಅತ್ ಬಹಳ ಪ್ರೀತಿಯ ಮನೋಭಾವ ಹೊಂದಿದ ಜಮಾಅತ್ ಆಗಿದೆ.

ಅದನ್ನು ಬಹಳ ಹೆಚ್ಚು ಪ್ರಶಂಸಿಸಲು ನಾನು ಇಚ್ಛಿಸುತ್ತೇನೆ. ನಿಮ್ಮ ಜಮಾಅತ್ ಮಾಡುವ ಸುವ್ಯವಸ್ಥೆಯನ್ನು ಕಂಡು ನಾನು ಆಶ್ಚರ್ಯಚಕಿತನಾಗಿದ್ದೇನೆ. ಇದು ಸೂಚಿಸುವುದೇನೆಂದರೆ ಸರಿಯಾದ ದಿಕ್ಕಿಗೆ ಸಾಗಲು ಲೋಕಕ್ಕೆ ನೀವು ಮಾರ್ಗದರ್ಶನ ನೀಡಬಲ್ಲವರಾಗಿದ್ದೀರಿ ಎಂದು ಹೇಳಿದರು. ಲ್ಯಾಟೀವಿಯಾದ ಒಬ್ಬ ವಿದ್ಯಾರ್ಥಿನಿ ಗ್ಲೋರಿಯಾ ಪ್ರಥಮ ಸಾರಿ ಜಲ್ಸಕ್ಕೆ ಆಗಮಿಸಿದ್ದರು. ಇದು ಆಕೆ ಭಾಗವಹಿಸಿದ ಪ್ರಥಮ ಇಸ್ಲಾಮೀ ಸಮಾರಂಭವಾಗಿತ್ತು. ಆಕೆ ಹೇಳುತ್ತಾರೆ: ನನಗೆ ಎಲ್ಲವೂ ಇಷ್ಟಕರವಾಯಿತು. ಆಹಾರ, ಪಾನೀಯ ಮೊದಲಾದುವು ಎಲ್ಲವೂ. ಜನರು ಬಹಳ ಸುಸ್ವಭಾವದಿಂದ ವರ್ತಿಸುತ್ತಿದ್ದರು. ಕಾರ್ಯನಿರತರಾಗಿದ್ದ ಲಜ್ನ ಸದಸ್ಯೆಯರು ಯಾವಾಗಲೂ ಮುಗುಳು ನಗುತ್ತಾ ಮಾತನಾಡುತ್ತಿದ್ದರು. ಈ ಸಮಾವೇಶದಲ್ಲಿ ಭಾಗವಹಿಸಿದಾಗ ಇಸ್ಲಾಮಿನ ಬಗ್ಗೆ ನನ್ನ ಯೋಚನೆಗಳು ಸಂಪೂರ್ಣವಾಗಿ ಬದಲಾವಣೆಗೊಂಡವು. ಲೋಕದ ಹಿತವನ್ನು ಆಶಿಸುವ ಕೆಲವು ಜನರು ಈಗಲೂ ಇದ್ದಾರೆಂದು ತಿಳಿದಾಗ ನನಗೆ ಬಹಳ ಸಂತೋಷವಾಯಿತು.

ಕೊಸೋವೋ ದೇಶದ ಒಬ್ಬ ವಕೀಲರು ಹೀಗೆ ಹೇಳಿದರು: ಜಲ್ಸದ ವ್ಯವಸ್ಥೆಯನ್ನು ದರ್ಶಿಸಿದಾಗ ಪ್ರತಿಯೊಬ್ಬ ವ್ಯಕ್ತಿ ಖಿಲಾಫತನ್ನು ಅನುಸರಿಸುವುದರಲ್ಲಿ ನಿರತನಾಗಿ ಕೆಲಸ ಮಾಡುತ್ತಿದ್ದಾನೆ ಎಂದು ನನಗೆ ಕಂಡಿತು. ಇದು ಜಮಾಅತಿನಲ್ಲಿ ಖಲೀಫರಾಗಿರುವವರ ಬಗ್ಗೆ ಜಮಾಅತಿನ ಜನರಲ್ಲಿರುವ ಪ್ರೀತಿ ಮತ್ತು ಅನುಸರಣೆಯ ಕಾರಣದಿಂದಾಗಿದೆ. ನನಗೆ ಖಲೀಫರನ್ನು ಸಂದರ್ಶಿಸುವ ಸಂದರ್ಭ ಲಭಿಸಿತು. ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಒಂದು ದಾರದಲ್ಲಿ ಪೋಣಿಸಲ್ಪಟ್ಟಿದ್ದಾರೆ. ಕೋಸೋವದಲ್ಲಿ ಸಹ ಇಂತಹ ಸಭೆಗಳು ಜರಗುತ್ತಿವೆ. ಆದರೆ ಈ ಸಭೆಯಲ್ಲಿ ಭಾಗವಹಿಸಿದಾಗ ಒಂದು ವಿಶಿಷ್ಟ ಅನುಭೂತಿ ತಲೆದೋರುತ್ತದೆ. ಪ್ರತಿಯೊಂದು ವರ್ಣ ಮತ್ತು ವಂಶದ ಜನರು ಈ ಜಲ್ಸದಲ್ಲಿ ಭಾಗವಹಿಸಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯ ಆವಶ್ಯಕತೆ ಬಗ್ಗೆ ಲಕ್ಷ್ಯ ನೀಡಲಾಗುತ್ತಿದೆ.

ಕೊಸೋವೋದಿಂದ ಆಗಮಿಸಿದ ಜನರಲ್ಲಿ ಒಬ್ಬ ಫಿಸಿಕ್ಸ್ ಪ್ರೊಫೆಸರ್ ಆರ್‌ಬರ್ ಎಂಬವರು ಸಹ ಇದ್ದರು. ಅವರು ಹೇಳುತ್ತಾರೆ: ಇಷ್ಟು ದೊಡ್ಡ ಸಭೆಯು ಜರಗುವಾಗ ಜನರ ಆವಶ್ಯಕತೆಗಳನ್ನು ಈಡೇರಿಸಲು ಸಾಧ್ಯವಿದೆ ಎಂಬ ವಿಷಯ ನನಗೆ ಅವಿಶ್ವಸನೀಯವಾಗಿತ್ತು. ನಾನು ಜಲ್ಸದಲ್ಲಿ ಭಾಗವಹಿಸಿ ಎಲ್ಲಾ ವ್ಯವಸ್ಥೆಯನ್ನು ಬಹಳ ಗಾಢವಾಗಿ ವೀಕ್ಷಿಸಿದೆ. ಪ್ರತಿಯೊಂದು ಸುವ್ಯವಸ್ಥಿತವಾಗಿ ಚಲಾಯಿಸಲ್ಪಡುವುದನ್ನು ನಾನು ಕಂಡೆನು. ಪ್ರತಿಯೊಬ್ಬನ ಆವಶ್ಯಕತೆ ಬಗ್ಗೆ ಪೂರ್ಣ ಲಕ್ಷ್ಯ ನೀಡಲಾಗುತ್ತಿದೆ. ಪ್ರತಿಯೊಂದು ಕೆಲಸಕ್ಕೋಸ್ಕರ ಒಬ್ಬ ಸ್ವಯಂ ಸೇವಕ ನೇಮಿಸಲ್ಪಟ್ಟಿದ್ದನು. ಲಂಗರ್‌ನಲ್ಲಿ ನಾನು ಒಬ್ಬ ವ್ಯಕ್ತಿಯನ್ನು ಕಂಡೆನು. ಆ ವ್ಯಕ್ತಿ ಕಳೆದ ಇಪ್ಪತ್ತೆರಡು ವರ್ಷಗಳಿಂದ ನೀರುಳ್ಳಿಯ ಹೊರಸಿಪ್ಪೆ ತೆಗೆದು ಕತ್ತರಿಸುತ್ತಿದ್ದಾರೆ. ಕಳೆದ ಇಪ್ಪತ್ತೆರಡು ವರ್ಷಗಳಲ್ಲಿ ಅವರ ಬಳಿ ಒಂದೇ ಕತ್ತಿ ಇದೆ. ಅವರು ಹೇಳಿದರು: ನಾನು ಈ ಕತ್ತಿ ಉಪಯೋಗಿಸುತ್ತಿರುವುದು ಏಕೆಂದರೆ ಚತುರ್ಥ ಖಲೀಫರು ಈ ಕತ್ತಿಯನ್ನು ಉಪಯೋಗಿಸಿದ್ದರು. ಅವರ ಕೈ ಈ ಕತ್ತಿಯನ್ನು ಸ್ಪರ್ಶಿಸಿದೆ ಎಂದು ಹೇಳಿದರು. ಪ್ರೊಫೆಸರ್ ಸಾಹೆಬರನ್ನು ಅದು ಬಹಳ ಪ್ರಭಾವಿಸಿತು.

ಮುಹಮ್ಮದ್ ಅಕ್‌ಬರ್ ಸಾಹಿಬ್ ಹೇಳುತ್ತಾರೆ: ಲೋಕದಲ್ಲಿ ಪರಿವರ್ತನೆ ಉಂಟು ಮಾಡಲು ಒಬ್ಬ ಮಹ್‌ದಿ ಆಗಮಿಸುವ ಬಗ್ಗೆ ಬಾಲ್ಯದಿಂದ ಆಲಿಸುತ್ತಿದ್ದೆವು ಮತ್ತು ಪ್ರತೀಕ್ಷಿಸುತ್ತಿದ್ದೆವು. ನಾವು ಪ್ರತೀಕ್ಷಿಸುತ್ತಿದ್ದ ಮಹ್‌ದಿ ಆಗಮಿಸಿ ಗತಿಸಿ ಹೋದರೆಂದೂ ಈಗ ಅವರ ಖಲೀಫರ ಶೃಂಖಲೆ ಜಾರಿಯಲ್ಲಿದೆ ಎಂದೂ ತಿಳಿದೆವು. ನಾನು ಜಮಾಅತಿನ ಸಾಹಿತ್ಯವನ್ನು ಅಧ್ಯಯನ ಮಾಡುವೆನು. ನನಗೆ ಸಮಾಧಾನ ಸಿಗುವುದೆಂದು ನನಗೆ ಭರವಸೆ ಇದೆ. ಹಂಗೇರಿ ದೇಶದ ಪ್ರೊಟೆಸ್ಟಂಟ್ ಚರ್ಚಿನ ಒಬ್ಬ ಪಾದರಿ ಹೇಳುತ್ತಾರೆ: ನಾನು ಕ್ರೈಸ್ತನಾಗಿದ್ದೇನೆ. ಆದರೆ ನಿಮ್ಮ ಜಲ್ಸದಲ್ಲಿ ಭಾಗವಹಿಸಿ ನನ್ನ ವಿಶ್ವಾಸ ಪುನಶ್ಚೇತನ ಗೊಂಡಿತು. ನಾನು ಉತ್ಸಾಹಭರಿತನಾಗಿ ಮರಳುತ್ತೇನೆ. ಹಂಗೇರಿ ದೇಶದ ಒಬ್ಬರು, ಅದಾರ್‌ಗಾ ಸಾಹಿಬ್, ನಿರಾಶ್ರಿತರ ಶಿಬಿರದ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರು ಹೇಳಿದರು: ನಿಮ್ಮ ವೈಭವಶಾಲಿ ಜಲ್ಸವನ್ನು ದರ್ಶಿಸುವಾಗ ಬಹಳ ಆಶ್ಚರ್ಯವಾಗುತ್ತದೆ. ನೀವು ಘೋಷಣೆ ಕೂಗುವಾಗ ಇಮಾಮ್ ಆಜ್ಞೆ ನೀಡಿದ ಕೂಡಲೆ ಓಗೊಡಲು ಸಿದ್ಧರಾಗಿರುವ ಹಾಗೆ ಭಾಸವಾಗುತ್ತದೆ. ಮೊದಲು ನನಗೆ ಬಹಳ ಭಯವಾಗುತ್ತಿತ್ತು. ಹಂಗೇರಿಯಲ್ಲಿ ಇಂತಹ ಸಮಾವೇಶ ಅಸಾಧ್ಯವೇ ಆಗಿದೆ. ಅಲ್ಲಿ ನೂರು ಜನರು ಜಮಾಯಿಸಿದರೆ ಒಂದು ಗಂಟೆಯೊಳಗೆ ಜಗಳ ಪ್ರಾರಂಭವಾಗುತ್ತವೆ. ಆದರೆ ಸಾವಿರ ಗಟ್ಟಲೆ ಜನರು ಜಮಾಯಿಸಿರುವ ಶಾಂತಿಭರಿತ ಸಮಾವೇಶವನ್ನು ಪ್ರಥಮ ಬಾರಿ ನಾನು ದರ್ಶಿಸಿದೆ. ಇದರ ಮೊದಲೆಂದೂ ನಾನು ಇಂತಹ ಸಭೆ ಕಂಡಿಲ್ಲ.

ಲಿಥ್ವೇನಿಯಾ ದೇಶದಿಂದ ಐವತ್ತು ಜನರ ಸಂಘ ಆಗಮಿಸಿತ್ತು. ಅವರಲ್ಲಿ ನಲ್ವತ್ತು ಜನರು ಅಹ್ಮದಿಯೇತರರಾಗಿದ್ದರು. ಹತ್ತು ಜನರು ಅಹ್ಮದಿಯರು. ಒಬ್ಬ ಮಹಿಳೆ ಹೇಳುತ್ತಾರೆ: ಜಲ್ಸದ ಸಮಯದಲ್ಲಿ ನಾನು ಸಹ ಜಮಾಅತಿನ ಒಂದು ಭಾಗವಾಗಿದ್ದೇನೆಂದು ಭಾಸವಾಯಿತು. ಸಮಾನವಾಗಿ ಪ್ರೀತಿಸುವ ಬಗ್ಗೆ ಮತ್ತು ಅನ್ಯರಿಗೆ ಸೇವೆ ಸಲ್ಲಿಸುವ ಬಗ್ಗೆ ನಮಗೆ ಈ ಜಲ್ಸ ಪಾಠ ನೀಡುತ್ತಿದೆ. ಅದರ ಸಕ್ರಿಯ ಅನುಷ್ಠಾನವನ್ನು ನಾವು ಜಲ್ಸದಲ್ಲಿ ಕಂಡೆವು.

ತಾಜಿಕಿಸ್ಥಾನದ ಒಬ್ಬ ಅಹ್ಮದಿಯೇತರ ವ್ಯಕ್ತಿ ರಹೀಮ್ ಸಾಹಿಬ್ ಜಲ್ಸಕ್ಕೆ ಆಗಮಿಸಿದ್ದರು. ಅವರು ರಾಜಕಾರಣೀಯೂ ಆಗಿದ್ದಾರೆ. ಅವರು ಹೇಳುತ್ತಾರೆ: ನಾನು ಜಲ್ಸದಲ್ಲಿ ಪ್ರಥಮ ಬಾರಿ ಭಾಗವಹಿಸಿದೆ. ನಾನು ಜಮಾಅತನ್ನು ಹತ್ತಿರದಿಂದ ವೀಕ್ಷಿಸಿದೆ. ಎಲ್ಲಾ ಕಾರ್ಯಕರ್ತರ ಮನೋಭಾವ ನನಗೆ ಅನುಕರಣೀಯ ಮಾದರಿಯಾಗಿದೆ. ರಾತ್ರಿ ಹಗಲು ಹೇಗೆ ಕೆಲಸ ನಿರ್ವಹಿಸಬಹುದೆಂದು ತಿಳಿಯಿತು. ಖಲೀಫರನ್ನು ಭೇಟಿಯಾದಾಗ ನನ್ನ ಮನಸ್ಸಿನಲ್ಲಿ ಎದ್ದೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರ ಲಭಿಸಿತು.

ಅಲ್‌ಬೇನಿಯಾ ದೇಶದ ಬರ್ಖ್ ಸಾಹಿಬ್ ಹೇಳುತ್ತಾರೆ: ನಾನು ಅಹ್ಮದಿಯ್ಯತ್ತಿನ ಕಠಿಣ ವಿರೋಧಿಯಾಗಿದ್ದೆ. ನನ್ನ ಸಹೋದರ ಮತ್ತು ಸ್ನೇಹಿತ ಅಹ್ಮದಿಯತ್ತಿಗೆ ಸೇರಿದ್ದರು. ನನ್ನ ಸಹೋದರ ಅಹ್ಮದಿಯತ್ತನ್ನು ತ್ಯಜಿಸಲೆಂದು ನಾನು ಸಾಧ್ಯವಿರುವ ಪ್ರಯತ್ನ ಮಾಡುತ್ತಿದ್ದೆ. ಕೊನೆಗೆ ನಾವು ತೀರ್ಮಾನಿಸಿದೆವು ಸತ್ಯದಲ್ಲಿ ಇರುವವರು ಜಯಶಾಲಿಗಳಾಗಲು

ಪ್ರಾರ್ಥಿಸಬೇಕೆಂದು. ಹಾಗೆ ನಿರಂತರ ಪ್ರಾರ್ಥನೆ ನಡೆಸಿದ ನಂತರ ನನ್ನ ಮನಸ್ಸು ಬಯಸಿತು, ನಾನು ಜಲ್ಸಕ್ಕೆ ಹೋಗಿ ಖಲೀಫರನ್ನು ಕಾಣಬೇಕೆಂದು. ನಾನು ಕಳೆದ ವರ್ಷ ಜಲ್ಸದಲ್ಲಿ ಭಾಗವಹಿಸಿದೆ. ಆಗ ನನಗೆ ಸ್ವಲ್ಪ ಸಮಾಧಾನ ಲಭಿಸಿತು. ಆದರೂ ಸ್ವಲ್ಪ ಆತಂಕವಿತ್ತು. ಆದರೆ ನಾನು ಖಲೀಫರನ್ನು ಈ ವರ್ಷ ಕಂಡದ್ದು ನಿರ್ಣಾಯಕವಾಯಿತು. ನಾನು ಅವರನ್ನು ನೋಡಿದಾಗ ತಕ್ಷಣ ನನ್ನ ಎಲ್ಲಾ ಹಗೆ ವಿದ್ವೇಷ ಸಂಶಯಗಳು ನಿವಾರಣೆಗೊಂಡವು. ಈಗ ನನಗೆ ಜಮಾಅತನ್ನು ನಿರಾಕರಿಸಲು ಸಾಧ್ಯವೇ ಇಲ್ಲದಾಗಿದೆ. ನಾನು ಜಲ್ಸದಿಂದ ಮರಳಿ ಬೈಅತ್ ಫಾರ್ಮ್ ಭರ್ತಿ ಮಾಡಿದೆ.

ಜುಮುಅ ನಮಾಝ್ ನಂತರ ಮೂವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಮೊದಲನೆಯದು, ಕೆನಡದ ಸಯ್ಯಿದ್ ಹಸನಾತ್ ಅಹ್ಮದ್ ಸಾಹಿಬರದಾಗಿದೆ. ಅವರು 92ನೇ ವಯಸ್ಸಿನಲ್ಲಿ 2018 ಅಗಸ್ಟ್ 27ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಹಝ್ರತ್ ಡಾಕ್ಟರ್ ಸಯ್ಯಿದ್ ಶಫೀ ಅಹ್ಮದ್ ಸಾಹಿಬ್ ದೆಹ್ಲವಿ ಮತ್ತು ಸಯ್ಯಿದ ಖುರೈಶ ತಾಹಿರ್ ಸಾಹಿಬ (ಬೇಗಮ್ ಶಫೀ) ರವರ ಪುತ್ರರಾಗಿದ್ದರು. ಎರಡನೆಯ ಜನಾಝ ಮುಬಾರಕ ಶೌಕತ್ ಸಾಹಿಬ ಅವರದಾಗಿದೆ. ಅವರು ಇಂಡೋನೇಶಿಯಾ ಮತ್ತು ಹಾಲೆಂಡಿನ ಮಾಜಿ ಮುಬಲ್ಲಿಗ್ ಹಾಫಿಝ್ ಖುದ್ರತುಲ್ಲಾ ಸಾಹಿಬರ ಪತ್ನಿಯಾಗಿದ್ದರು. ಅವರು 2018 ಸೆಪ್ಟೆಂಬರ್ 8ರಂದು 94ನೇ ವಯಸ್ಸಿನಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ಮುಹ್ತರಮ್ ಬಾಬೂ ಅಬ್ದುಲ್ಲತ್ತೀಫ್ ಸಾಹಿಬರ ಪುತ್ರಿಯಾಗಿದ್ದರು. ಮೂರನೆಯ ಜನಾಝ ಚೌಧರಿ ಖಾಲಿದ್ ಸೈಫುಲ್ಲ ಸಾಹಿಬ್, ನಾಯಿಬ್ ಅಮೀರ್ ಜಮಾಅತ್ ಅಸ್ಟ್ರೇಲಿಯಾದ್ದಾಗಿದೆ. ಅವರು 2018 ಸೆಪ್ಟೆಂಬರ್ 16ರಂದು 87ನೇ ವಯಸ್ಸಿನಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.**

*****


***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London. On 21-09-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon